ಇ) ಈ ಭವನ ನಿರ್ಮಾಣಕ್ಕೆ ಹಿಂದಿನ ಸರ್ಕಾರ ಮಂಜೂರು ಮಾಡಿದ ಅನುದಾನವೆಷ್ಟು,

ಈ) ಈ ಹಣ ಬಿಡುಗಡೆಯಾಗಿದೆಯೇ;

ಉ) 2013–14ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಸರ್ಕಾರ ಬಿಡುಗಡೆ ಮಾಡಲಿರುವ ಅನುದಾನವೆಷ್ಟು;

ಊ) ಈ ನಿರ್ಮಾಣ ಕಾರ್ಯ ಯಾವಾಗ ಪೂರ್ಣಗೊಳ್ಳುವುದು?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನದ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) ₹ 5.00 ಕೋಟಿ

ಇ) ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಈ) ಇಲ್ಲ

ಉ) ಸರ್ಕಾರದ ಪರಿಶೀಲನೆಯಲ್ಲಿದೆ

ಊ) ಉದ್ಭವಿಸುವುದಿಲ್ಲ

"ನಿರ್ಮಲ್ ಭಾರತ್" ಯೋಜನೆ

(504)407; ಶ್ರೀ ಶಿವಾನಂದ ಎಸ್ ಪಾಟೀಲ (ಬಸವನಬಾಗೇವಾಡಿ)

ಅ) "ನಿರ್ಮಲ್ ಭಾರತ್" ಯೋಜನೆ ಯಾವಾಗ ಜಾರಿಗೆ ಬಂದಿದೆ; ಇದರ ಮುಖ್ಯೋದ್ದೇಯಗಳೇನು,

ಆ) ಗ್ರಾಮಗಳನ್ನು ತ್ಯಾಜ್ಯ ಮುಕ್ತ ಮಾಡುವಲ್ಲಿ "ನಿರ್ಮಲ್ ಭಾರತ್" ಯೋಜನೆಯಲ್ಲಿ ನಮ್ಮ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನದ

ಮೊತ್ತವೆಷ್ಟು; ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕ ತೆರೆಯಲು ಸರ್ಕಾರ ಉದ್ದೇಶಿಸಿದೆ,

ಈ) ಬಗ್ಗೆ ಗ್ರಾಮೀಣ ಭಾಗದ ಜನರಲ್ಲಿ ಅರಿವು ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು;

ಉ) ತ್ಯಾಜ್ಯವನ್ನು ಹೆದ್ದಾರಿಯ ಬಳಿ ತಂದು ಸುರಿಯದಂತೆ ತಡೆಯಲು ಸರ್ಕಾರದ ಕೈಗೊಂಡ ಕ್ರಮವೇನು?

ಶ್ರೀ ಎಚ್ ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು)

ಅ) 1 04.2012 ರಲ್ಲಿ ನಿರ್ಮಲ್ ಭಾರತ ಅಭಿಯಾನ ಪ್ರಾರಂಭವಾಯಿತು, ಇದಕ್ಕೂ ಮೊದಲು 2005 ಅಕ್ಟೋಬರ್ 2 ರಿಂದ ಸಂಪೂರ್ಣ ಸ್ವಚ್ಚತಾ ಆಂದೋಲನ ಎಂಬ ಹೆಸರಿನಿಂದ ಜಾರಿಯಲ್ಲಿತ್ತು.

ಆ) 2012–13ಕ್ಕೆ ₹ 1670.50 ಲಕ್ಷಗಳು ಬಿಡುಗಡೆಯಾಗಿರುತ್ತದೆ

2013–14ಕ್ಕೆ ಬಿಡುಗಡೆಯಾಗಿರುವುದಿಲ್ಲ ಹಿಂದಿನ ಬಾಕಿಯಲ್ಲಿನ ಹಣದಲ್ಲಿ ಬಳಸಲಾಗಿರುತ್ತದೆ. ಒಟ್ಟು 35 ಗ್ರಾಮ ಪಂಚಾಯಿತಿಗಳಿಗೆ ಅನುದಾನ ನೀಡಲಾಗಿದ್ದು ವಿವರವನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಒಟ್ಟು 100 ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕ ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಲಾಗಿದೆ.

ಇ) ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಬಗ್ಗೆ ಗ್ರಾಮೀಣ ಜನರಲ್ಲಿ ಅರಿವು ಮೂಡಿಸಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಭೆ ನಡೆಸಲಾಗಿದೆ. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರಸ್ತಾವನೆಗಳನ್ನು ತಯಾರಿಸುವ

ಕುರಿತು ಸುತ್ತೋಲೆ, ಮಾರ್ಗಸೂಚಿ ಮತ್ತು ಕಿರು ಕೈಪಿಡಿಗಳ ಮೂಲಕ ತಿಳಿಸಲಾಗಿದೆ.

ಈ) ಪಂಚಾಯತ್ ರಾಜ್ ಖಾಯ್ದೆ ಪ್ರಕರಣ 110 (ಉಪದ್ರವಕಾರಿ ಕೆಲಸ ನಿಷೇಧ) ಅಡಿಯಲ್ಲಿ ಪಂಚಾಯಿತಿಗಳಿಗೆ ದಂಡ ವಿಧಿಸುವಂತಹ ಅಧಿಕಾರ ನೀಡಲಾಗಿದೆ

ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಯ ವಿವರ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಗ್ರಾಮಪಂಚಾಯತಿ
1	ಕೊಡಗು	ವಿರಾಜಪೇಟೆ	ಪೊನ್ನಪ್ಪಸಂತೆ
2	ಕೊಡಗು	ಸೋಮವಾರ ಪೇಟೆ	ನಂಜರಾಯ ಪಟ್ಟಣ
3	ಕೊಡಗು	ಸೋಮವಾರ ಪೇಟೆ	ನಲ್ಲಿಹುದಿಕೇರಿ
4	ಕೊಡಗು	ಸೋಮವಾರ ಪೇಟೆ	ಬೆಟ್ಟದಹಳ್ಳಿ
5	ಕೊಡಗು	ಸೋಮವಾರ ಪೇಟೆ	ಚೌಡ್ಲು
6	ಕೊಡಗು	ಮಡಿಕೇರಿ	ಬೇಂಗೂರು
7	ಕೊಡಗು	ಮಡಿಕೇರಿ	ನಾಪೋಕ್ಲು
8	ಕೊಡಗು	ಮಡಿಕೇರಿ	ಕುಂದಚೇರಿ
9	ಕೊಡಗು	ವಿರಾಜಪೇಟೆ	ಪಾಲಿಬೆಟ್ಟ
10	ಕೊಡಗು	ಸೋಮವಾರ ಪೇಟೆ	ಕೊಡ್ಲಿಪೇಟೆ
11	ಕೊಡಗು	ವಿರಾಜಪೇಟೆ	ಬಾಳೆಲೆ
12	ಹಾವೇರಿ	ಹಾನಗಲ್	ಗೊಂದಿ
13	ಹಾವೇರಿ	ಹಾನಗಲ್	ಆಡೂರು
14	ಹಾವೇರಿ	ಬ್ಯಾಡಗಿ	ಹಿರೇಹಳ್ಳಿ
15	ಹಾವೇರಿ	ಹಿರೇಕೆರೂರು	ಅಬಲೂರು
16	ದಕ್ಷಿಣ ಕನ್ನಡ	ಬಂಟ್ವಾಳ	ಗೊಳ್ತಮಜಲು
17	ದಕ್ಷಿಣ ಕನ್ನಡ	ಬಂಟ್ವಾಳ	ಬಾಳ್ತಿಲ
18	ದಕ್ಷಿಣ ಕನ್ನಡ	ಬಂಟ್ವಾಳ	ಕೊರ್ನಾಡು
19	ದಕ್ಷಿಣ ಕನ್ನಡ	ಮಂಗಳೂರ	ಸೋಮೇಶ್ವರ
20	ಉತ್ತರ ಕನ್ನಡ	ಸಿರಸಿ	ಬನವಾಸಿ

21	ಉತ್ತರ ಕನ್ನಡ	ಯಲ್ಲಾಪೂರ	ಕಿರುವತ್ತಿ
22	ಉತ್ತರ ಕನ್ನಡ	ಮುಂಡಗೋಡು	ಮಳಗಿ
23	ಉತ್ತರ ಕನ್ನಡ	ಕುಮಟ	ಗೋಕರ್ಣ
24	ಧಾರವಾಡ	ಕಲಘಟಗಿ	ಗುಮ್ಮಗೋಳ
25	ಧಾರವಾಡ	ಧಾರವಾಡ	ಹೆಬ್ಬಳ್ಳಿ
26	ಧಾರವಾಡ	ಹುಬ್ಬಳ್ಳಿ	ಚಬ್ಬಿ
27	ಧಾರವಾಡ	ನವಲಗುಂದ	ಶಿರೂರ
28	ಬೆಳಗಾಂ	ಹುಕ್ಕೇರಿ	ಬಿ ಬಾಗೇವಾಡಿ
29	ಬೆಳಗಾಂ	ಸವದತ್ತಿ	ಶಿವಪುರ
30	ಬೆಳಗಾಂ	ಚಿಕ್ಕೋಡಿ	ಚಂದೂರು
31	ಬೆಳಗಾಂ	ಬೆಳಗಾವಿ	ಮುತಗ
32	ಬೆಳಗಾಂ	ಅಥಣಿ	ಶಿರಗುಪ್ಪಿ
33	ಬೆಂಗಳೂರು (ಗ್ರಾಮಾಂತರ)	ದೊಡ್ಡಬಳ್ಳಾಪುರ	ಎಂ ಹೊಸಳ್ಳಿ
34	ಬೆಂಗಳೂರು (ಗ್ರಾಮಾಂತರ)	ದೇವನಹಳ್ಳಿ	ಬೂದಿಗೇರೆ
35	ಬೆಂಗಳೂರು (ಗ್ರಾಮಾಂತರ)	ದೇವನಹಳ್ಳಿ	ಜಾಲಿಗೆ

ಪ್ರೌಢಶಾಲಾ ಮಕ್ಕಳಿಗೆ ಸೈಕಲ್ ವಿತರಣೆ

398(369); ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) 2013–14ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲಾ ಮಕ್ಕಳಿಗೆ ಈ ವರೆಗೆ ವಿತರಿಸಲಾಗಿರುವ ಉಚಿತ ಸೈಕಲ್‌ಗಳ ವಿವರವನ್ನು ಒದಗಿಸುವುದು. (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಸಾಲಿನಲ್ಲಿ ಯಾವ ದಿನಾಂಕದಿಂದ ಸೈಕಲ್‌ಗಳನ್ನು ವಿತರಿಸಲಾಗಿದೆ (ಈ ಸಂಬಂಧ ಸರ್ಕಾರಿ ಆದೇಶದ ಪ್ರತಿಯನ್ನು ಒದಗಿಸುವುದು)